| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 30 ನಿ | **ಕನ್ನಡ**<br>**ಅಕ್ಕನಿಗೊಂದು ಪತ್ರ** | * ಬೇರೆ ಮಕ್ಕಳ ಬರವಣಿಗೆ ಓದುವುದು. | * ಒಗಟುಗಳ ಪುಸ್ತಕ, * ಸರಳ ಶಿಶುಗೀತೆಗಳ ಪುಸ್ತಕ, * ಕಥೆಗಳ ಚಿತ್ರಪಟಗಳು | ಓರೇಮಣಿ | ಹಿಂದಿನ ಅವಧಿಯಲ್ಲಿ ಬರೆದು ಅದಲು ಬದಲು ಮಾಡಿ ಓದಿದ ಪತ್ರಗಳನ್ನು ಬಿಟ್ಟು ಉಳಿದ ಬೇರೆ ಮಕ್ಕಳ ಪತ್ರಗಳನ್ನು ತೆಗೆದುಕೊಂಡು ಪ್ರತಿ ಮಗುವೂ ಓದಲು ಹೇಳುವುದು. | **ಕನ್ನಡ**<br>**ನಮ್ಮ ಕನಸು** | * ಸರಳ ಹಾಗೂ ಗೊತ್ತಿರುವ ವಿಷಯಗಳ ಬಗ್ಗೆ ಮಾತನಾಡುವುದು.<br>* ಪತ್ರದಲ್ಲಿ ಹೇಳಲಾದ ವಿಚಾರಗಳನ್ನು ಚರ್ಚಿಸಿ ತೀರ್ಮಾನಕ್ಕೆ ಬರುವುದು. | ಪೂರಕ ಸಾಮಗ್ರಿಗಳು | ಶಿಕ್ಷಕರು | ಸಂತೆ ಮೈದಾನದಲ್ಲಿ ನಡೆಯುವ ಸಂಭಾಷಣೆಯನ್ನು ತಿಳಿಸಿ ಅಭ್ಯಾಸ ಮಾಡಲು ತಿಳಿಸುವರು. |
| | 10 ನಿ | | | | ಶಿಕ್ಷಕರು | **ಕಲಿಕಾಂಶ ಚಟುವಟಿಕೆ**<br>ಕ್ಷೇಮ ಶ್ರೀ 18.11.2006<br>"ಅಕ್ಕರೆಯ.....................................................<br>...........................................................ಎಲ್ಲಿ ಸಿಕ್ತು ಎಂದು ಕೇಳಿದರು" ಈ ಗದ್ಯವನ್ನು ಶಿಕ್ಷಕನು ಸ್ವರಭಾರ ಏರಿಳಿತದೊಂದಿಗೆ ಓದುವರು. ನಂತರ ಓದುತ್ತಾ ಮಕ್ಕಳಿಂದ ಹೇಳಿಸುವರು. | | | | ಓರೇಮಣಿ | ಮಕ್ಕಳು ಹೊರಾಂಗಣಕ್ಕೆ ಹೋಗಿ ತಮಗೆ ನೀಡಲಾದ ಸೂಚನೆ ಮತ್ತು ಪಾತ್ರಗಳಿಗನುಗುಣವಾಗಿ ಮೇಲೆ ಹೇಳಲಾದ ಸಂದರ್ಭಕ್ಕನುಗುಣವಾಗಿ ಅಭಿನಯಿಸುವ ಅಭ್ಯಾಸವನ್ನು ಮಾಡುವರು. |
| | 10 ನಿ | | | | ಶಿಕ್ಷಕರು | ಮೇಲೆ ಹೇಳಲಾದ ಗದ್ಯಭಾಗವನ್ನು ಪ್ರತಿ ಮಗುವಿನಿಂದ ಓದಿಸಲು ಮತ್ತು ಗದ್ಯಭಾಗವನ್ನು ಬರೆಯಲು ತಿಳಿಸುವರು. | | | | ಓರೇಮಣಿ | ಮೇಲಿನ ಅಭ್ಯಾಸವನ್ನು ಮುಂದುವರಿಸುವರು. |
| | 30 ನಿ | | | | ಓರೇಮಣಿ | ಪ್ರತಿ ಮಗುವಿನಿಂದ ಮೇಲೆ ಹೇಳಲಾದ ಗದ್ಯಭಾಗವನ್ನು ಓದಲು ಹೇಳುವುದು. ನಂತರ ಬರೆಸುವರು.<br><br>**ಸೂಚನೆ :** ಕಾಲಾವಕಾಶವಿದ್ದರೆ ಆ ಸಮಯದಲ್ಲಿ ಮಕ್ಕಳು ಬರೆದ ಗದ್ಯಭಾಗವನ್ನು ಪ್ರತಿ ಮಗುವಿನಿಂದ ಅದಲು ಬದಲು ಮಾಡಿ ಓದುವುದಕ್ಕೆ ಶಿಕ್ಷಕರು ಸೂಚನೆ ನೀಡುವರು. ಅದರಂತೆ ವಿದ್ಯಾರ್ಥಿಗಳು ಚಟುವಟಿಕೆ ನಿರ್ವಹಿಸುವರು. | | | | ಶಿಕ್ಷಕರು | ಮೇಲಿನ ಚಟುವಟಿಕೆಗನುಗುಣವಾಗಿ ಪಾತ್ರಾಭಿನಯ ಮತ್ತು ಸಂಭಾಷಣೆಯನ್ನು ಮಕ್ಕಳಿಂದ ಮಾಡಿಸಿ ಅದನ್ನು ಶಿಕ್ಷಕರು ವೀಕ್ಷಿಸುವರು.<br><br>ನಂತರ ಮಕ್ಕಳೊಂದಿಗೆ ಪರಸ್ಪರ ಚರ್ಚಿಸುವರು. |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **2ನೇ** | 20 ನಿ | **ಜೀವನ ವಿಜ್ಞಾನ : ಪ್ರಾರ್ಥನೆ** | * ಮಕ್ಕಳಲ್ಲಿ ಏಕಾಗ್ರತೆ, ಭಕ್ತಿ, ಇವುಗಳನ್ನು ಮಾಡಿಸುವುದು. | | ಶಿಕ್ಷಕರು | ಮಕ್ಕಳ ಮನಸ್ಸನ್ನು ಏಕಾಗ್ರತೆಗೊಳಿಸಲು ಶಿಕ್ಷಕರಿಗೆ ತಿಳಿದಿರುವ ಒಂದು ಭಕ್ತಿಗೀತೆಯನ್ನು ಹೇಳಿಕೊಡುವುದು. | **ಗಣಿತ : ಭಿನ್ನರಾಶಿ, ದಶಮಾಂಶ ಮತ್ತು ಶೇಕಡ** | * ನಿತ್ಯೋಪಯೋಗಿ ಅಳತೆ ಮಾನಗಳನ್ನು ಶೇಕಡಾ ಮಾನದಲ್ಲಿ ವ್ಯಕ್ತಪಡಿಸುವುದು. | | ಶಿಕ್ಷಕರು | 3ನೇ ತರಗತಿ ಮಕ್ಕಳೊಂದಿಗೆ ಸೇರಿ ಭಕ್ತಿಗೀತೆ ಹೇಳುವರು. |
| | 20 ನಿ | | | | ಶಿಕ್ಷಕರು | ಮೇಲೆ ಹೇಳಿದ ಭಕ್ತಿಗೀತೆಯನ್ನು ಮಕ್ಕಳು ಶಿಕ್ಷಕರ ಸಹಕಾರದೊಂದಿಗೆ ಅಭ್ಯಾಸ ಮಾಡುವರು.<br>**ಸೂಚನೆ** : ಹೊರಾಂಗಣದಲ್ಲಿ ಅಭ್ಯಾಸ ಮಾಡಲು ತಿಳಿಸುವರು. | | | | ಹಿರೇಮಣಿ | ಅನೇಕ ಉದಾಹರಣೆಗಳ ಮೂಲಕ ಪೈಸೆಯನ್ನು ಶೇಕಡಾ ಕ್ರಮಕ್ಕೆ ಪರಿವರ್ತಿಸುವ ರೀತಿಯನ್ನು ತಿಳಿಸುವರು. ಇದೇ ರೀತಿ ಸೆಂ.ಮೀ.ನ್ನು, ಸಹ ಶೇಕಡಾ ಕ್ರಮಕ್ಕೆ ಪರಿವರ್ತಿಸುವರು.<br>ಪಠ್ಯ ಪುಸ್ತಕದ ಪುಟಸಂಖ್ಯೆ 38ರಲ್ಲಿಯ ಮುಖ್ಯಾಂಶಗಳನ್ನು ಪುನರ್ಮನನ ಮಾಡಿಸುವರು. |
| | 40 ನಿ | | | | ಶಿಕ್ಷಕರು | ಮಕ್ಕಳಿಗೆ ಪ್ರಾರ್ಥನೆಯನ್ನು ಯಾವ ಸಮಯದಲ್ಲಿ ಮಾಡಬೇಕು? ಹೇಗೆ ಮಾಡಬೇಕು ? ಅದರ ಉಪಯೋಗಗಳೇನು ಎಂಬ ವಿಷಯದ ಬಗ್ಗೆ ಮಕ್ಕಳೊಂದಿಗೆ ಚರ್ಚಿಸುತ್ತಾ ವಿವರಣೆಯನ್ನು ತಿಳಿಸುವರು. | ಕೇಳಿ–ಕಲಿ | | | | ----ಕೇಳಿ–ಕಲಿ ಪಾಠವನ್ನು ಕೇಳಿಸುವರು ---- |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಬೋಧನಾ ಘಟಕ | ಸಾಮರ್ಥ್ಯ ಅಂಶ | ಬೋಧನಾ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಬೋಧನಾ ಘಟಕ | ಸಾಮರ್ಥ್ಯ ಅಂಶ | ಬೋಧನಾ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ | 20 ನಿ | ಗಣಿತ : ಸಂಕಲನ<br>ವಿಸ್ತರಣಾ ವಿಧಾನದಲ್ಲಿ ಸಂಕಲನ | * ಮೊತ್ತವು 999ಕ್ಕೆ ಮೀರದಂತೆ ದಶಕವಿಲ್ಲದೆ ಹಾಗೂ ದಶಕವಿರುವ ಹಾಗೆ ಮೂರು ಅಂಕಿಗಳುಳ್ಳ ಎರಡು ಅಥವಾ 3 ಸಂಖ್ಯೆಗಳ ಸಂಕಲನ ಮಾಡುವರು. | ಹಾಡು<br>&<br>ಮಕ್ಕಳು | ಶಿಕ್ಷಕರು | ಮಕ್ಕಳಿಗೆ ಮೊದಲು ಒಂದು ಕಾಗೆ ಬಂದಿತು ತಿಂಡಿಯನ್ನು ಕಂಡಿತು ಎಂಬ ಸಂಕಲನದ ಹಾಡನ್ನು ಹೇಳಿಕೊಡುವರು ನಂತರ ಒಂದೆರಡು ದಶಕ ರಹಿತ ಸಂಕಲನದ ಲೆಕ್ಕಗಳನ್ನು ಪುನರಾವರ್ತಿಸುವರು. | | | | | |
| | 50 ನಿ | | | ಪಠ್ಯಪುಸ್ತಕ<br>&<br>ಮಿಂಚುಪಟ್ಟಿ | | ಮೊದಲು ಮಕ್ಕಳಿಗೆ ಪುಟಸಂಖ್ಯೆ 53ರಲ್ಲಿನರುವಂತೆ ಹಂತ – 1 & ಹಂತ – 2, ಹಂತ – 3ರಲ್ಲಿರುವಂತೆ ವಿಸ್ತರಣಾ ವಿಧಾನದ ಸಂಕಲನವನ್ನು ತಿಳಿಸಿಕೊಡುವರು.<br>1) ಉದಾ : 142 = 1 ನೂರು + 4 ಹತ್ತುಗಳು + 2 ಬಿಡಿ<br>134 = 1 ನೂರು + 3 ಹತ್ತುಗಳು + 4 ಬಿಡಿ<br>2) 276 = 2 ನೂರು + 7 ಹತ್ತುಗಳು + 6 ಬಿಡಿಗಳು<br>3) 2 ನೂರುಗಳು + 7 ಹತ್ತುಗಳು + 6 ಬಿಡಿಗಳು<br>200 + 70 + 6 = 276.<br>ಈ ವಿಸ್ತರಿಸಿರುವುದನ್ನು ಕೂಡಿಸಿ ಬರೆಯುವರು. | | | | | |
| | 10 ನಿ | | | | | * ನಂತರ ನೂರು, ಹತ್ತು & ಬಿಡಿ ಪಟ್ಟಿಯಲ್ಲಿರುವಂತೆ ದಶಕ ರಹಿತ ಸಂಕಲನವನ್ನು ಮೂಡಿಸುವರು. | | | | | |
| 4ನೇ | 10 ನಿ | ಪರಿಸರ ಅಧ್ಯಯನ<br>ನಮ್ಮ ಜ್ಞಾನೇಂದ್ರಿಯಗಳು | * ಜ್ಞಾನೇಂದ್ರಿಯಗಳ ಸ್ವಚ್ಛತೆ ಮತ್ತು ರಕ್ಷಣೆಯ ವಿಧಾನ ಅರಿಯುವರು. | ಜೇಡಿಮಣ್ಣು | ಶಿಕ್ಷಕರು | ಶಿಕ್ಷಕರು ಮೊದಲು ಮಕ್ಕಳಿಗೆ ಮಣ್ಣನ್ನು ತರಲು 10 ನಿಮಿಷ ಕಾಲಾವಕಾಶವನ್ನು ನೀಡುವರು. | | | | | |
| | 20 ನಿ | | | | ಶಿಕ್ಷಕರು | ಮಣ್ಣನ್ನು ತೆಗೆದುಕೊಂಡು ಮಕ್ಕಳಿಗೆ ಕಣ್ಣು ಮತ್ತು ಮೂಗಿನ ಮಾದರಿಯನ್ನು ಮಕ್ಕಳಿಗೆ ಮಾಡಿ ತೋರಿಸುವರು. | | | | | |
| | 40 ನಿ | | | | | ಶಿಕ್ಷಕರ ನಿರ್ದೇಶನದಂತೆ ಮಕ್ಕಳು ಕಣ್ಣು ಹಾಗೂ ಮೂಗಿನ ಮಾದರಿಗಳನ್ನು ಜೇಡಿಮಣ್ಣಿನಿಂದ ತಯಾರು ಮಾಡುವರು. | | | | | |
| | 10 ನಿ | | | | | ನಂತರ ಮಕ್ಕಳು ಮಾಡಿದ ಮಾದರಿಗಳನ್ನು ಪ್ರದರ್ಶನ ಮಾಡುತ್ತಾ ಉತ್ತಮವಾಗಿ ಮೂಡಿ ಬಂದ ಮಾದರಿಗಳನ್ನು ಶಿಕ್ಷಕರು ಪ್ರಶಂಸಿಸುವರು. | | | | | |

5ನೇ ತರಗತಿಯು ನಾಲ್ಕನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ.

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | ಕನ್ನಡ<br>ಅಕ್ಕನಿಗೊಂದು ಪತ್ರ | * ಬೇರೆ ಮಕ್ಕಳ ಬರವಣಿಗೆ ಓದುವುದು. | | ಶಿಕ್ಷಕರು | ಚೈತನ್ಯ 1 ಕೈಪಿಡಿಯ 80ನೇ ಪುಟದಲ್ಲಿರುವ "ನರಿಯು ತೋಟಕ್ಕೆ ಹೋಯಿತು" ಈ ಅಭಿನಯ ಗೀತೆಯನ್ನು ಹೇಳಿಕೊಡುವರು. | ಕನ್ನಡ<br>ನಮ್ಮ ಕನಸು | * ಸರಳ ಹಾಗೂ ಗೊತ್ತಿರುವ ವಿಷಯಗಳ ಬಗ್ಗೆ ಮಾತನಾಡುವುದು.<br>* ಮಧ್ಯದಲ್ಲಿ ಹೇಳಲಾದ ವಿಚಾರಗಳನ್ನು ಚರ್ಚಿಸಿ ತೀರ್ಮಾನಕ್ಕೆ ಬರುವುದು. | | ಶಿಕ್ಷಕರು | 3ನೇ ತರಗತಿಯ ಮಕ್ಕಳೊಂದಿಗೆ ಸೇರಿ ಅಭಿನಯಿಸುವರು. |
| | 30 ನಿ | | | | ಹಿರೇಮಣಿ | ಹಿಂದಿನ ಅವಧಿಯಲ್ಲಿ ಬರೆದ ಗದ್ಯಭಾಗವನ್ನು ಮಕ್ಕಳು ಅದಲು ಬದಲು ಮಾಡಿಕೊಂಡು ಓದಿಸುವರು.<br>ಪ್ರತಿ ಮಗು ಓದುವಾಗ ಎಲ್ಲಾ ಮಕ್ಕಳೂ ಆಲಿಸುವರು. | | | | ಶಿಕ್ಷಕರು | "ನಾವು ಎಳೆಯರು ನಾವು ಗೆಳೆಯರು..........................<br>................................................................<br>...................................... ಎದೆಯ ಬಾನಿನ ಚಂದಿರ"<br>ಈವರೆಗಿನ 8 ಸಾಲು ಪದ್ಯವನ್ನು ರಾಗಬದ್ಧವಾಗಿ ಅಭಿನಯದೊಂದಿಗೆ ಹೇಳಿಕೊಡುವರು. |
| | 20 ನಿ | | | | ಶಿಕ್ಷಕರು | ಸಮಾರಂಭವಂತೂ.................................................<br>...................................................... ಆಸೆ ಪೂರೈಸಬೇಕು ಈ ಗದ್ಯ ಭಾಗವನ್ನು ಸ್ವರಭಾರ ಏರಿಳಿತದೊಂದಿಗೆ ಓದುವರು. | ಜೀವನ ವಿಜ್ಞಾನ | ಸಂಕಲ್ಪದ ಮಹತ್ವ ಅರಿಯುವುದು. | | ಹಿರೇಮಣಿ | ಮಕ್ಕಳಿಗೆ ಗ್ರಂಥಾಲಯದ ಪುಸ್ತಕಗಳನ್ನು ಕೊಟ್ಟು ಏಕಾಗ್ರತೆಯಿಂದ ಮೌನ ಓದು ಓದಲು ತಿಳಿಸುವರು. |
| | 20 ನಿ | | | | ಹಿರೇಮಣಿ | ಮೇಲೆ ಹೇಳಿದ ಗದ್ಯಭಾಗವನ್ನು ಪ್ರತಿ ಮಗುವಿನಿಂದ ಓದಿಸುವುದು. | | | | ಶಿಕ್ಷಕರು | * ಸಂಕಲ್ಪ ಎಂದರೇನು ?<br>* ಸಂಕಲ್ಪದ ಅಗತ್ಯತೆ ಏನು ?<br>* ಅದರ ಅನುಕೂಲದ ಬಗ್ಗೆ ಮಕ್ಕಳಿಗೆ ತಿಳಿಸುವರು ಪ್ರತಿ ದಿನವೂ ಅನುಸರಿಸುವಂತೆ ಸೂಚನೆ ಕೊಡುವರು<br>ಸಂಕಲ್ಪ ಎಂದರೆ ದಿನನಿತ್ಯ ಮಾಡುವ ಕೆಲವು ತಪ್ಪುಗಳನ್ನು ತಿದ್ದಿಕೊಳ್ಳಲು ಮತ್ತು ಮತ್ತೊಮ್ಮೆ ಮಾಡದಂತೆ ಕೈಗೊಳ್ಳುವ ದೃಢ ನಿರ್ಧಾರ ಎಂಬುದು. ಎಂಬುದನ್ನು ತಿಳಿಸಿಕೊಡುವರು. |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2ನೇ | 10 ನಿ | ಜೀವನ ವಿಜ್ಞಾನ ಏಕಾಗ್ರತೆ | * ಏಕಾಗ್ರತೆಯ ಪ್ರಯೋಜನ ಮತ್ತು ಪೂರಕ ಅಂಶಗಳ ಬಗ್ಗೆ ತಿಳಿಯುವರು. | | ಹಿರೇಮಣಿ | ಹಿರೇಮಣಿ ಶಿಕ್ಷಕರ ಸಲಹೆ ಮೇರೆಗೆ ಒಂದು ನೀತಿ ಕಥೆಯನ್ನು ಹೇಳುವರು. ಈ ಕಥೆಯನ್ನು ಮಕ್ಕಳು ಏಕಾಗ್ರತೆಯಿಂದ ಕುಳಿತು ಕೇಳುವರು. | ಗಣಿತ : ಭಿನ್ನರಾಶಿ, ದಶಮಾಂಶ ಮತ್ತು ಶೇಕಡ. | * ಭಿನ್ನರಾಶಿಗಳ ಪುನರ್ಬಲನ ಮಾಡುವುದು. | | ಶಿಕ್ಷಕರು | ಪಠ್ಯಪುಸ್ತಕದ ಪುಟ ಸಂಖ್ಯೆ 39ರಲ್ಲಿರುವ ಅಭ್ಯಾಸ 1.3ರ ಮೌಖಿಕ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು. |
| | 30 ನಿ | | | | ಶಿಕ್ಷಕರು | ಇದೇ ರೀತಿ ಇತರೆ ಮಕ್ಕಳಿಗೆ ತಿಳಿದ ನೀತಿ ಕಥೆಗಳನ್ನು ಹೇಳಿಸುವರು. | | | | ಹಿರೇಮಣಿ | ಲಿಖಿತ ಲೆಕ್ಕಗಳನ್ನು ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವರು. ಪ್ರತಿ ಮಗವೂ ವೀಕ್ಷಣೆಯಿಂದ ಪುನರ್ಮನನ ಮಾಡಿಕೊಳ್ಳುವರು. |
| | 40 ನಿ | | | | ಶಿಕ್ಷಕರು | ಮಕ್ಕಳಿಗೆ ಏಕಾಗ್ರತೆ ಎಂದರೇನು ?<br>ಏಕಾಗ್ರತೆಯ ಪ್ರಯೋಜನ ಮತ್ತು ಪೂರಕ ಅಂಶಗಳ ಬಗ್ಗೆ ತಿಳಿಸುವರು.<br>ನಂತರ ಮಕ್ಕಳಿಗೆ ಸ್ವಾರಸ್ಯಕರವಾದ ನೀತಿ ಕಥೆ ಹೇಳುವರು. | ಜೀವನ ವಿಜ್ಞಾನ ಏಕಾಗ್ರತೆ | * ಏಕಾಗ್ರತೆಯ ಅಗತ್ಯತೆಯ ಬಗ್ಗೆ ತಿಳಿಯುವುದು | | ಶಿಕ್ಷಕರು | 3ನೇ ತರಗತಿ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಭಾಗವಹಿಸುವರು. |
| 3ನೇ | 20 ನಿ | ಪರಿಸರ ಅಧ್ಯಯನ ನಮ್ಮ ಜ್ಞಾನೇಂದ್ರಿಯಗಳು | * ಜ್ಞಾನೇಂದ್ರಿಯಗಳ ಸ್ವಚ್ಛತೆ ಮತ್ತು ರಕ್ಷೆಯ ವಿಧಾನ ಅರಿಯುವರು. | ಮಕ್ಕಳು | ಶಿಕ್ಷಕರು | ಮೊದಲು ತರಗತಿಯಲ್ಲಿನ ಎಲ್ಲಾ ಮಕ್ಕಳನ್ನು 5 ಗುಂಪುಗಳನ್ನಾಗಿ ವಿಂಗಡಿಸುವುದು. ನಂತರ ಒಂದು ಮಗು ಚೆಕಿಂಗ್ ಇನ್ಸ್‌ಪೆಕ್ಟರ್ & ಇನ್ನೊಂದು ಮಗ ಸಂಕೇತ ಸೂಚನೆ ನೀಡಲು ತಯಾರು ಮಾಡಿ 5 ಗುಂಪುಗಳಲ್ಲಿ ಪ್ರತಿ ಗುಂಪಿಗೆ ಒಂದೊಂದು ಹೆಸರನ್ನು ಪಠ್ಯ ಪುಸ್ತಕದಲ್ಲಿರುವಂತೆ ನೀಡುವರು. | | | | | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ |
| | 60 ನಿ | | | | | ನಂತರ ಪಠ್ಯಪುಸ್ತಕದ ಪುಟ ಸಂಖ್ಯೆ 39ರಲ್ಲಿರುವಂತೆ ಸ್ವಚ್ಛತಾ ರೈಲು ಆಟವನ್ನು ಆಡಿಸುವರು. | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4ನೇ | 10 ನಿ | ಗಣಿತ ಸಂಕಲನ<br>ದಶಕವಿರುವಂತೆ ಸಂಕಲನ | * ಮೊತ್ತವು 999ಕ್ಕೆ ಮೀರದಂತೆ ದಶಕವಿಲ್ಲದೆ ಹಾಗೂ ದಶಕವಿರುವ ಹಾಗೆ 3 ಅಂಕಿಗಳುಳ್ಳ 2 ಅಥವಾ 3 ಸಂಖ್ಯೆಗಳ ಸಂಕಲನ ಮಾಡುವುದು. | | ಶಿಕ್ಷಕರು | ಮೊದಲು ಮಕ್ಕಳಿಗೆ ವಿಸ್ತರಣಾ ರೂಪದಲ್ಲಿನ ಒಂದು ದಶಕರಹಿತ ಸಂಕಲನ ಲೆಕ್ಕವನ್ನು ಪುನರಾವರ್ತಿಸುವರು. | 5ನೇ ತರಗತಿಯು ನಾಲ್ಕನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ. | | | | |
| | 30 ನಿ | | | ಸಂಖ್ಯೆಗಳ ಮಿಂಚುಪಟ್ಟಿ | ಶಿಕ್ಷಕರು | ನಂತರ ಮಕ್ಕಳಿಗೆ ಪಠ್ಯಪುಸ್ತಕದ ಪುಟಸಂಖ್ಯೆ 54ರಲ್ಲಿ ಇರುವಂತೆ ಹಂತ – 1,2,3 ಈ ಕ್ರಮಗಳಲ್ಲಿ ವಿಸ್ತರಣಾಕ್ರಮದಲ್ಲಿ ದಶಕವಿರುವ ಸಂಕಲನ ಕ್ರಿಯೆಯನ್ನು ಸವಿವರವಾಗಿ ವಿವರಣೆ ನೀಡುವರು. | | | | | |
| | 40 ನಿ | ಸಾ.ಉ.ಉ.ಕಾ<br>ಗಡಿಯಾರ ತಯಾರಿಕೆ | * ಗಡಿಯಾರವನ್ನು ತಯಾರು ಮಾಡಿಸುವರು. | ರಟ್ಟು<br>ಐಸ್‌ಕ್ರೀಂ ಕಡ್ಡಿ,<br>ಅಂಟು | ಶಿಕ್ಷಕರು | ಈ ಅವಧಿಯಲ್ಲಿ ಶಿಕ್ಷಕರು ರಟ್ಟನ್ನು ತೆಗೆದುಕೊಂಡು ಅದನ್ನು ವೃತ್ತಾಕಾರವಾಗಿ ಕತ್ತರಿಸಿ ಗಡಿಯಾರದಲ್ಲಿರುವಂತೆ ಸಮಯ ಸೂಚಕ ಅಂಕೆಗಳನ್ನು ಬರೆದು ನಂತರ ಕಡ್ಡಿಗಳಿಂದ ಸಂಖ್ಯಾಸೂಚಕಗಳನ್ನು ಅಂಟಿಸಿ ಮಾದರಿ ಗಡಿಯಾರ ರಚನೆ ಮಾಡಿ ತೋರಿಸುವರು. | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | ಕನ್ನಡ<br>ಅಕ್ಕನಿಗೊಂದು ಪತ್ರ | * ಬೇರೆ ಮಕ್ಕಳ ಬರವಣಿಗೆ ಓದುವುದು. | ಚೈತನ್ಯ I ಸಾಹಿತ್ಯ | ಶಿಕ್ಷಕರು | ಚೈತನ್ಯ 1 ಸಾಹಿತ್ಯ ಕೈಪಿಡಿಯ ಪುಟಸಂಖ್ಯೆ 72ರಲ್ಲಿರುವ ಅಭಿನಯ ಗೀತೆ "ಚಂದಮಾಮ ಬಾರಯ್ಯ" ಈ ಗೀತೆಯನ್ನು ಹೇಳಿಕೊಡುವರು. | ಕನ್ನಡ ನಮ್ಮ ಕನಸು | * ಸರಳ ಹಾಗೂ ಗೊತ್ತಿರುವ ವಿಷಯಗಳ ಬಗ್ಗೆ ಮಾತನಾಡುವುದು<br>* ಪದ್ಯದಲ್ಲಿ ಹೇಳಲಾದ ವಿಷಯಗಳನ್ನು ಚರ್ಚಿಸಿ ತೀರ್ಮಾನಕ್ಕೆ ಬರುವುದು. | | ಶಿಕ್ಷಕರು | 3ನೇ ತರಗತಿ ಮಕ್ಕಳೊಂದಿಗೆ ಸೇರಿ ಹಾಡುವರು. |
| | 30 ನಿ | | | | ಹಿರೇಮಣಿ | ಹಿಂದಿನ 2 ಅವಧಿಯಲ್ಲಿ ಹೇಳಲಾದ ಸಂಪೂರ್ಣ ಪಾಠವನ್ನು ಪ್ರತಿ ಮಗುವಿನಿಂದಲೂ ಓದಿಸಲು ಹೇಳುವರು. ಹಿರೇಮಣಿ ತಪ್ಪುಗಳನ್ನು ತಿದ್ದುವರು. | | | | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಬೋಧಿಸಿದ ಪದ್ಯದ 8 ಸಾಲುಗಳ ತಾತ್ಪರ್ಯವನ್ನು ವಿವರವಾಗಿ ತಿಳಿಸುವರು ಮತ್ತು ಹೊಸ ಪದಗಳ ಅರ್ಥ ತಿಳಿಸುವರು.<br>ಹೇಳಲಾದ ತಾತ್ಪರ್ಯದ ಬಗ್ಗೆ ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಕೇಳುತ್ತಾ ಚರ್ಚಿಸುವರು. |
| | 10 ನಿ | | | | ಹಿರೇಮಣಿ | ಮೇಲಿನ ಚಟುವಟಿಕೆಯನ್ನು ಮುಂದುವರಿಯುವರು. | ಜೀವನ ವಿಜ್ಞಾನ : ಪ್ರಾರ್ಥನೆ | * ಪ್ರಾರ್ಥನೆಯ ಮಹತ್ವ ಮತ್ತು ಅಗತ್ಯಗಳನ್ನು ಅರಿಯುವುದು. | | ಶಿಕ್ಷಕರು | ಶಿಕ್ಷಕರಿಗೆ ತಿಳಿದಿರುವ ಒಂದು ಭಕ್ತಿ ಗೀತೆಯನ್ನು ಹೇಳಿಕೊಟ್ಟು ಪ್ರಾರ್ಥನೆಯ ಉಪಯೋಗ ಮತ್ತು ಹಾಡುವ ಸಮಯದ ಬಗ್ಗೆ ತಿಳಿಸುವರು. |
| | 30 ನಿ | | | | ಶಿಕ್ಷಕರು | ಉಳಿದ ಪಾಠ ಭಾಗವಾದ "ಪವಾತ್ರಶ್ರೀ ಅತ್ತೆಯವರಿಗೆ...................................................................................................................ಬಸವೇಶ್ವರ ವೃತ್ತ ಜಗತ್, ಕಲ್ಬುರ್ಗಿ–585103"ರ ಪಾಠವನ್ನು ಓದುವುದು.<br>ಪತ್ರ ಬರೆಯುವಾಗ ಮುಕ್ತಾಯದ ಬಗ್ಗೆ ತಿಳಿಸುವರು. | | | | | ಹೇಳಿಕೊಟ್ಟ ಪ್ರಾರ್ಥನಾ ಗೀತೆಯನ್ನು ಹೊರಾಂಗಣದಲ್ಲಿ ಅಭ್ಯಾಸ ಮಾಡುವರು. |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2ನೇ | 10 ನಿ | ಜೀವನ ವಿಜ್ಞಾನ : ಬೌದ್ಧಿಕ ಆಟಗಳು | ಪ್ರಶ್ನೆಗಳಿಗೆ ಉತ್ತರಿಸುವ ಸಾಮರ್ಥ್ಯ ಬೆಳೆಸುವುದು. | ಚೈತನ್ಯ I<br>ಚಿತ್ರಗಳ ಮಿಂಚುಪಟ್ಟಿ | ಶಿಕ್ಷಕರು | ಚೈತನ್ಯ 1 ಕೈಪಿಡಿ ಪುಸ್ತಕದ ಪುಟ ಸಂಖ್ಯೆ 73 ಮತ್ತು 74ರ ಆಟಗಳನ್ನು ಆಡಲು ಸೂಚನೆ ಕೊಡುವುದು (ಹೌದು ಅಲ್ಲ ಆಟ) | ಗಣಿತ : ಭಿನ್ನರಾಶಿ, ದಶಮಾಂಶ ಮತ್ತು ಶೇಕಡಾ ಕ್ರಮ | * ಭಿನ್ನರಾಶಿ, ದಶಮಾಂಶ ಮತ್ತು ಶೇಕಡ ಕ್ರಮದ ಪುನರ್ಮನನ ಮಾಡುವರು. | | ಶಿಕ್ಷಕರು | ಮುಂದಿನ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕೆಲವು ಸೂಚನೆ ನೀಡುವರು. |
| | 30 ನಿ | | | | ಶಿಕ್ಷಕರು | ಶಿಕ್ಷಕರು ಕೊಟ್ಟ ಮಾರ್ಗದರ್ಶನದಂತೆ ಕೆಲವು ಚಿತ್ರಗಳ ಮಿಂಚುಪಟ್ಟಿ ತೆಗೆದುಕೊಂಡು ಅವುಗಳನ್ನು ಬಳಸುತ್ತಾ "ಹೌದು, ಅಲ್ಲ" ಆಟ ಆಡುವರು. | | | | ಹಿರೇಮಣಿ | ಪಠ್ಯಪುಸ್ತಕದ ಪುಟ ಸಂಖ್ಯೆ 39 ಮತ್ತು 40ರಲ್ಲಿರುವ ಲಿಖಿತ ಶೀರ್ಷಿಕೆಯಡಿಯಲ್ಲಿರುವ ಕ್ರಮಸಂಖ್ಯೆ 1 ರಿಂದ 8ರ ವರೆಗಿನ ಲೆಕ್ಕಗಳನ್ನು ಮಕ್ಕಳಿಂದ ಮಾಡಿಸುತ್ತಾ ಭಿನ್ನರಾಶಿ ದಶಮಾಂಶ ಹಾಗೂ ಶೇಕಡಾ ಕ್ರಮದ ಸಾಮರ್ಥ್ಯಗಳನ್ನು ದೃಢಗೊಳಿಸುವರು.<br>**ಸೂಚನೆ** : ಶಿಕ್ಷಕರು ಅವಧಿಯ ಕೊನೆಯಲ್ಲಿ ಪರಿಶೀಲಿಸಿ ಮಾರ್ಗದರ್ಶನ ನೀಡುವರು. |
| | 40 ನಿ | ಸಾ.ಉ.ಉ.ಕಾ.<br>ಗಡಿಯಾರದ ಮಾದರಿ ತಯಾರಿಕೆ | * ಸೃಜನ ಶೀಲತೆ ಬೆಳೆಸುವುದು | ರಟ್ಟು ಕಡ್ಡಿಗಳು, ಗಮ್, ವೆಲ್‌ವೆಟ್ ಪೇಪರ್, ಗುಂಡುಪಿನ್ನು ಇತ್ಯಾದಿ. | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಹೇಳಲಾದ ಗಡಿಯಾರದ ಮಾದರಿಯನ್ನು ಶಿಕ್ಷಕರು ಹೇಳಿದ ರೀತಿಯಲ್ಲಿ ಮಕ್ಕಳು ತಯಾರಿಸುವರು. ತಯಾರಿಕೆಗೆ ಶಿಕ್ಷಕರು ಸೂಕ್ತ ಮಾರ್ಗದರ್ಶನ ನೀಡುವರು. | | | | | ----ಕೇಳಿ-ಕಲಿ ಕಾರ್ಯಕ್ರಮವನ್ನು ಕೇಳಿಸುವರು ---- |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಘಟಕ | ಕಲಿಕಾ ಸಾಮರ್ಥ್ಯ | ಬೋಧನೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕ | ಕಲಿಕಾ ಸಾಮರ್ಥ್ಯ | ಬೋಧನೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ | 10 ನಿ | ಗಣಿತ ಸಂಕಲನ<br>ದಶಕವಿರುವಂತೆ ಸಂಕಲನ ಮಾಡುವುದು. | * ಮೊತ್ತವು 999ಕ್ಕೆ ಮೀರದಂತೆ ದಶಕವಿಲ್ಲದೆ ಹಾಗೂ ದಶಕವಿರುವ ಹಾಗೆ 3 ಅಂಕಿಗಳುಳ್ಳ 2 ಅಥವಾ 3 ಸಂಖ್ಯೆಗಳ ಸಂಕಲನ ಮಾಡುವುದು. | | ಶಿಕ್ಷಕರು | ಈಗಾಗಲೇ ವಿಸ್ತರಣಾ ಕ್ರಮದಲ್ಲಿ ದಶಕವಿರುವ ಸಂಕಲನದ 3 ಹಂತಗಳನ್ನು ಪುನರಾವರ್ತಿಸುವರು (ಸಂಕ್ಷಿಪ್ತವಾಗಿ) | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ. | | | | |
| | 30 ನಿ | | | | ಶಿಕ್ಷಕರು | ನಂತರ ಪಠ್ಯಪುಸ್ತಕದ ಪುಟ ಸಂಖ್ಯೆ 55ರಲ್ಲಿ ಬರುವ ಹಂತ – 3ರಲ್ಲಿರುವಂತೆ ಸಂಕಲನ ಮಾಡುವ ವಿಧಾನವನ್ನು ವಿವರಿಸುವರು. | | | | | |
| | 40 ನಿ | ಕೇಳಿ-ಕಲಿ ರೇಡಿಯೋ ಕಾರ್ಯಕ್ರಮ | | | | | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4ನೇ | 20 ನಿ | ಪರಿಸರ ಅಧ್ಯಯನ<br>ನಮ್ಮ ಜ್ಞಾನೇಂದ್ರಿಯಗಳು | * ದೇಹದ ಭಾಗಗಳಾದ ಜ್ಞಾನೇಂದ್ರಿಯಗಳನ್ನು ಗುರುತಿಸುವರು ಮತ್ತು ಅವುಗಳ ಕಾರ್ಯಗಳನ್ನು ಅರಿಯುವರು.<br>* ಜ್ಞಾನೇಂದ್ರಿಯಗಳ ಸ್ವಚ್ಛತೆ ಮತ್ತು ರಕ್ಷಣೆಯ ವಿಧಾನ ಅರಿಯುವರು. | ಹಾಡು | ಶಿಕ್ಷಕರು | ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಅವರಿಗೆ ಅಭಿನಯದ ಮೂಲಕ "ಡಿಂಗುಟಕ ಡಿಂಗುಟಕ" ಗೀತೆಯನ್ನು ಹೇಳಿಕೊಡುತ್ತಾ ಮಕ್ಕಳಿಂದ ಅಭಿನಯವನ್ನು ಮಾಡಿಸುವರು. | | | | | 5ನೇ ತರಗತಿಯ ನಾಲ್ಕನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ. |
| | 60 ನಿ | | | | ಶಿಕ್ಷಕರು | ಈಗಾಗಲೇ ಕಲಿತಿರುವಂತಹ ನಮ್ಮ ಜ್ಞಾನೇಂದ್ರಿಯಗಳು ಪಠ್ಯದ ಮುಖ್ಯಾಂಶಗಳು ದೃಢೀಕರಣಗೊಳ್ಳಲು ಪೂರಕವಾಗುವಂತೆ ಇಡೀ ಪಾಠವನ್ನು ಕುರಿತು ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಕೇಳುವ ಮೂಲಕ ಪಠ್ಯಭಾಗವನ್ನು ಕುರಿತು ವಿದ್ಯಾರ್ಥಿಗಳ ಮರು ಮೌಲ್ಯಮಾಪನ ಮಾಡುವರು. | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | ಕನ್ನಡ<br>ಅಕ್ಕನಿಗೊಂದು ಪತ್ರ | * ಬೇರೆ ಮಕ್ಕಳ ಬರವಣಿಗೆ ಓದುವುದು. | | ಶಿಕ್ಷಕರು | ಚೈತನ್ಯ 1. ಕೈಪಿಡಿ ಪುಸ್ತಕದ ಪುಟಸಂಖ್ಯೆ 81ರಲ್ಲಿರುವ "ನಾನು ಬತ್ತೀನಿ ಜಾತ್ರೆಗೆ" ಎಂಬ ಅಭಿನಯ ಗೀತೆ ಹೇಳಿಕೊಡುವರು. | ಕನ್ನಡ ನಮ್ಮ ಕನಸು | * ಸರಳ ಹಾಗೂ ಗೊತ್ತಿರುವ ವಿಷಯಗಳ ಬಗ್ಗೆ ಮಾತನಾಡುವುದು<br>* ಪದ್ಯದಲ್ಲಿ ಹೇಳಲಾದ ವಿಷಯಗಳನ್ನು ಚರ್ಚಿಸಿ ತೀರ್ಮಾನಕ್ಕೆ ಬರುವುದು. | | ಶಿಕ್ಷಕರು | 3ನೇ ತರಗತಿ ಮಕ್ಕಳೊಂದಿಗೆ ಸೇರಿಕೊಂಡು ಅಭಿನಯದೊಂದಿಗೆ ಹಾಡುವರು. |
| | 30 ನಿ | | | | ಹಿರೇಮಣಿ | ನಿಮ್ಮ ಶಾಲೆಯಲ್ಲಿ ನಡೆಯುವ ಸ್ವಾತಂತ್ರ್ಯ ದಿನಾಚರಣೆಯ ಬಗ್ಗೆ, ನಿಮ್ಮ ಅಕ್ಕನಿಗೆ ಒಂದು ಪತ್ರ ಬರೆಯಲು ಹೇಳುವರು.<br>ಶಿಕ್ಷಕರು ಪತ್ರದ ಪ್ರಾರಂಭ ಮತ್ತು ಅಂತ್ಯದ ಬಗ್ಗೆ ತಿಳಿಸುವರು.<br>ಪತ್ರವನ್ನು ಹಿರೇಮಣಿ ಸಹಕಾರದೊಂದಿಗೆ ಬರೆಯುವರು. | | | | ಶಿಕ್ಷಕರು | ಮುಂದಿನ ಪದ್ಯಭಾಗವಾದ "ಜಾತಿ ರೋಗದ ಭೀತಿ ಕಳೆಯುತ.............................................................. ................................................... ದೀಕ್ಷೆ ಇಂದೇ ತೊಡುವೆವು" ಪದ್ಯವನ್ನು ರಾಗಬದ್ಧವಾಗಿ ಹೇಳಿಕೊಡುವರು.<br>ಅಭಿನಯದೊಂದಿಗೆ ಮಕ್ಕಳಿಗೆ ಹೇಳಿಕೊಡುವರು. |
| | 20 ನಿ | | | | ಹಿರೇಮಣಿ | ಮೇಲಿನ ಚಟುವಟಿಕೆಯನ್ನು ಮುಂದುವರೆಸುವರು. | ಜೀವನ ವಿಜ್ಞಾನ : ಧ್ಯಾನ | | | ಶಿಕ್ಷಕರು | ಶಿಕ್ಷಕರು ಧ್ಯಾನದ ಮಹತ್ವ, ಧ್ಯಾನ ಮಾಡುವ ರೀತಿ, ಇದರ ಉಪಯೋಗವನ್ನು ತಿಳಿಸುವರು. ನಂತರ ಹಿರೇಮಣಿಗೆ ಧ್ಯಾನ ಮಾಡಿಸುವಂತೆ ತಿಳಿಸುವರು. |
| | 20 ನಿ | | | | ಶಿಕ್ಷಕರು | ಮೇಲಿನ ಚಟುವಟಿಕೆಯಲ್ಲಿ ಬರೆದ ಪತ್ರಗಳನ್ನು ಬೇರೆ ಮಕ್ಕಳಿಂದ ಓದಿಸುವರು. | | | | ಹಿರೇಮಣಿ | ಶಿಕ್ಷಕರು ಕೊಟ್ಟ ಸಲಹೆಯಂತೆ ಧ್ಯಾನ ಮಾಡಿಸುವರು. |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **2ನೇ** | 10 ನಿ | **ಗಣಿತ : ಸಂಕಲನ (ಗಣಿತದ ಮೂಲ ಕ್ರಿಯೆಗಳು)** | * ನಿತ್ಯ ಜೀವನದಲ್ಲಿ ಸಂಕಲನ ಕ್ರಿಯೆ ಅರಿಯುವುದು. | | ಶಿಕ್ಷಕರು | "ಎಷ್ಟೆಷ್ಟು ಎಷ್ಟು, ನಾನು ಹೇಳಿದಷ್ಟು" ಆಟ ಆಡಿಸುವುದು. | **ಗಣಿತ<br>ಭಿನ್ನರಾಶಿ, ದಶಮಾಂಶ ಮತ್ತು ಶೇಕಡ** | * ಭಿನ್ನರಾಶಿ, ದಶಮಾಂಶ ಮತ್ತು ಶೇಕಡಾ ಕ್ರಮದ ಪುನರ್ಮನನ ಮಾಡುವುದು. | | ಶಿಕ್ಷಕರು | 3ನೇ ತರಗತಿ ಮಕ್ಕಳೊಂದಿಗೆ ಸೇರಿ ಆಟ ಆಡುವರು. |
| | 30 ನಿ | | | ಸಂಖ್ಯಾ ಮಿಂಚು ಪಟ್ಟಿಗಳು | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಬೋಧಿಸಲಾದ ದಶಕ ಸಹಿತ ಸಂಕಲನ ಲೆಕ್ಕಗಳನ್ನು ಮಾಡಿಸುವರು.<br>**ಸೂಚನೆ :** ಶಿಕ್ಷಕರು ಮೊತ್ತ 999ಕ್ಕೆ ಮೀರದಂತೆ ಬರುವ ಸಂಖ್ಯೆಗಳ ಮಿಂಚುಪಟ್ಟಿ ತಯಾರಿಸಿ ಕೊಡುವುದು. | | | | ಹಿರೇಮಣಿ | ಪಠ್ಯಪುಸ್ತಕದ ಪುಟ ಸಂಖ್ಯೆ 41, 42 ಮತ್ತು 43ರಲ್ಲಿರುವ ಸಂಪದೀಕರಣ ಮತ್ತು ಸ್ವ ಮೌಲ್ಯಮಾಪನಕ್ಕಾಗಿ ಶೀರ್ಷಿಕೆಯಡಿಯಲ್ಲಿರುವ ಎಲ್ಲಾ ಸಮಸ್ಯೆಗಳನ್ನು ಬಿಡಿಸುವರು. |
| | 10 ನಿ | | | | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | **ಸಾ.ಉ.ಉ.ಕಾ<br>ಸಂಖ್ಯಾ ಡೈಸ್‌ಗಳ ತಯಾರಿಕೆ** | | | ಶಿಕ್ಷಕರು | ದಪ್ಪ ಡ್ರಾಯಿಂಗ್ ಹಾಳೆಯನ್ನು ತೆಗೆದುಕೊಂಡು 3 x 5 ಇಂಚು ಅಳತೆಯಲ್ಲಿ ಕತ್ತರಿಸಿಕೊಂಡು ಅವುಗಳನ್ನು ಚಿತ್ರದಲ್ಲಿ ತೋರಿಸಿರುವಂತೆ ಕತ್ತರಿಸಿ ಅಂಟಿಸುವರು ಮತ್ತು ಅಂಕಿಗಳನ್ನು ಬರೆಯುವರು. [ಡಾಟ್ ಗೆರೆಗಳನ್ನು ಕತ್ತರಿಸಬೇಕು]. |
| | 30 ನಿ | | | | ಶಿಕ್ಷಕರು | ಪಠ್ಯಪುಸ್ತಕದ ಪುಟ ಸಂಖ್ಯೆ 55 ಮತ್ತು 56ರಲ್ಲಿರುವ ಲೆಕ್ಕಗಳನ್ನು ಶಿಕ್ಷಕರ ಸಹಕಾರದಿಂದ ಕಪ್ಪು ಹಲಗೆಯ ಮೇಲೆ ಮಕ್ಕಳು ಮಾಡುವರು. | | | ಡ್ರಾಯಿಂಗ್ ಶೀಟ್, ಸ್ಕೆಚ್ ಪೆನ್, ಅಂಟು (ಗಮ್) | ಹಿರೇಮಣಿ |    ನಂತರ ಶಿಕ್ಷಕರ ಮಾರ್ಗದರ್ಶನದಲ್ಲಿ ಹಿರೇಮಣಿ ಸಹಕಾರದಿಂದ ಮಕ್ಕಳು ಡೈಸ್‌ಗಳನ್ನು ತಯಾರಿಸುವರು. |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **3ನೇ** | 30 ನಿ | **ಪರಿಸರ ಅಧ್ಯಯನ<br>ನಮ್ಮ ಹಲ್ಲುಗಳು** | * ಹಲ್ಲುಗಳ ವಿಧಗಳು ಗುರುತಿಸುವದು.<br>* ಹಲ್ಲುಗಳ ಕಾರ್ಯ ಸ್ವಚ್ಛತೆ & ರಕ್ಷಣೆಯ ವಿಧಾನಗಳನ್ನು ಅರಿಯವರು. | ಮಕ್ಕಳ ಹಲ್ಲುಗಳ ಚಾರ್ಟ್ | ಶಿಕ್ಷಕರು | ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಒಬ್ಬ ಚುರುಕಾದ ಮಗುವಿನಿಂದ ದೇಹದ ಸ್ವಚ್ಛತೆಯ ಬಗ್ಗೆ ಮುಕಾಭಿನಯ ಮಾಡಿಸುತ್ತಾ ಉಳಿದ ಮಕ್ಕಳು ಅದು ಏನನ್ನು ಸೂಚಿಸುತ್ತದೆ ಎಂಬುದನ್ನು ತಿಳಿಸುವ ಚಟುವಟಿಕೆ ಪ್ರತಿ ಮಗುವಿನಿಂದ ಮಾಡಿಸುವರು. | | | | | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ |
| | 30 ನಿ | | | ಮಕ್ಕಳ ಹಲ್ಲುಗಳ ಚಾರ್ಟ್ | ಶಿಕ್ಷಕರು | ಈಗಾಗಲೇ ಜ್ಞಾನೇಂದ್ರಿಯಗಳ ಬಗ್ಗೆ ತಿಳಿದಿರುವುದರಿಂದ, ಆಹಾರ ಅಗಿಯುವ ಹಲ್ಲುಗಳ ಬಗ್ಗೆ ಈಗ ತಿಳಿಯೋಣ. ಹಲ್ಲುಗಳಲ್ಲಿ 3 ವಿಧಗಳೆಂಬುದನ್ನು ಮನವರಿಕೆ ಮಾಡಿಸುವುದು.<br>**ಬಾಚಿಹಲ್ಲುಗಳು**<br>ಬಾಚಿಹಲ್ಲುಗಳೆಂದರೇನು ? ತಿಳಿಸುತ್ತಾ ಅವುಗಳ ವಿನ್ಯಾಸ ಮತ್ತು ಕೆಲಸಗಳನ್ನು ಸವಿವರವಾಗಿ ವಿವರಿಸುವರು.<br>ಸರಳ ಪ್ರಶ್ನೆಗಳ ಮೂಲಕ ಪಠ್ಯದ ಮುಖ್ಯಾಂಶಗಳು ಮತ್ತೊಮ್ಮೆ ಪುನರಾವರ್ತನೆಯಾಗುವಂತೆ ಮಾಡುತ್ತಾ ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡುವರು. | | | | | |
| | 20 ನಿ | | | | | | | | | | |
| **4ನೇ** | 30 ನಿ | **ಸಾ.ಉ.ಉ.ಕಾ<br>ಬೆಂಕಿ ಪೆಟ್ಟಿಗೆಯಿಂದ ಟೆಲಿಫೋನ್** | * ಅನುಪಯುಕ್ತ ವಸ್ತುಗಳನ್ನು ಬಳಸಿಕೊಂಡು ಮಕ್ಕಳಿಂದ ಟೆಲಿಫೋನ್ ಮಾದರಿಯನ್ನು ತಯಾರಿಸುವ ಕೌಶಲ ಬೆಳೆಸುವುದು. | ಬೆಂಕಿಪೆಟ್ಟಿಗೆ ದಾರ | ಶಿಕ್ಷಕರು | ಮೊದಲ ಬೆಂಕಿಪೆಟ್ಟಿಗೆ ಮತ್ತು ಉದ್ದವಾದ ದಾರವನ್ನು ತೆಗೆದುಕೊಂಡು ಅದನ್ನು ಟೆಲಿಫೋನ್ ಮಾದರಿ ತಯಾರಿಸುವರು ಟೆಲಿಫೋನ್‌ನಲ್ಲಿ ಮಾತನಾಡುವ ರೀತಿಯಲ್ಲಿ ಮಾದರಿಯಾಗಿ ಮಾತನಾಡಿ ತೋರಿಸುವರು. | | | | | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ. |
| | 50 ನಿ | | | | ಶಿಕ್ಷಕರು | ನಂತರ ಅದೇ ಉಪಕರಣಗಳನ್ನು ಮಕ್ಕಳಿಗೆ ನೀಡಿ, ಫೋನ್ ಮಾದರಿ ತಯಾರಿಸಿ, ಮಾತನಾಡಲು ತಿಳಿಸುವುದು. | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | ಕನ್ನಡ : ಅಕ್ಕನಿಗೊಂದು ಪತ್ರ | * ಬೇರೆ ಮಕ್ಕಳ ಬರಹಗಳನ್ನು ಓದುವುದು. | ಚೈತನ್ಯ 1 ಕೈಪಿಡಿ | ಶಿಕ್ಷಕರು | ಚೈತನ್ಯ 1 ಕೈಪಿಡಿಯ ಪುಟ ಸಂಖ್ಯೆ 110ರಲ್ಲಿರುವ "ಬೇಲಿ ಮೇಲೆ ಹಾರಾಡಿ" ಅಭಿನಯ ಗೀತೆಯನ್ನು ಹಾಡಿಸುವರು. | ಕನ್ನಡ : ನಮ್ಮ ಕನಸು | * ಸರಳ ಹಾಗೂ ಗೊತ್ತಿರುವ ವಿಷಯಗಳ ಬಗ್ಗೆ ಮಾತನಾಡುವುದು.<br>* ಪಠ್ಯದಲ್ಲಿ ಹೇಳಲಾದ ವಿಷಯಗಳನ್ನು ಚರ್ಚಿಸಿ ತೀರ್ಮಾನಕ್ಕೆ ಬರುವುದು. | | ಶಿಕ್ಷಕರು | 3ನೇ ತರಗತಿ ಮಕ್ಕಳೊಂದಿಗೆ ಸೇರಿ ಅಭಿನಯಿಸುವರು. |
| | 30 ನಿ | | | ಮಕ್ಕಳು ಬರೆದ ಪತ್ರಗಳು | ಹಿರೇಮಣಿ | ಹಿಂದಿನ ಅವಧಿಯಲ್ಲಿ ತಯಾರಿಸಲಾದ ಸ್ವಾತಂತ್ರ್ಯ ದಿನಾಚರಣೆಯ ಬಗ್ಗೆ ಅಕ್ಕನಿಗೆ ಬರೆದ ಪತ್ರವನ್ನು ಮಕ್ಕಳು ಅದಲು ಬದಲು ಮಾಡಿಕೊಂಡು ಹಿರೇಮಣಿ ಸಹಕಾರದೊಂದಿಗೆ ಓದುವರು. | | | | ಶಿಕ್ಷಕರು | **ಕಲಿಕಾ ಅಂಶ**<br>ಹಿಂದಿನ ಅವಧಿಯಲ್ಲಿ ಹೇಳಿದ ಪದ್ಯದ 8 ಸಾಲುಗಳ ತಾತ್ಪರ್ಯವನ್ನು ಹೇಳುತ್ತಾ ಹೊಸ ಪದಗಳ ಅರ್ಥವನ್ನು ಕಪ್ಪು ಹಲಗೆಯ ಮೇಲೆ ಬರೆಸುವರು ಮತ್ತು ಹೊಸಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಲು ತಿಳಿಸುವರು. |
| | 20 ನಿ | | | | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ಮುಂದುವರಿಯುವರು. | ಸಾ.ಉ.ಉ.ಕಾ. | ಏಕಾಗ್ರತೆ ಮೂಡಿಸುವುದು. | ಜೀವನ ವಿಜ್ಞಾನ ಕೈಪಿಡಿ | ಶಿಕ್ಷಕರು | ಯೋಗ ಎಂದರೇನು ?<br>ಯೋಗದ ಉಪಯೋಗಗಳನ್ನು ತಿಳಿಸುತ್ತಾ ಯೋಗದ ಪ್ರಾರ್ಥನೆಯನ್ನು ಕಪ್ಪು ಹಲಗೆಯ ಮೇಲೆ ಬರೆದು ಹೇಳಿಕೊಡುವುದು.<br>ಯೋಗೇನ ಚಿತ್ತಸ್ಯ...................... |
| | 20 ನಿ | | | | ಶಿಕ್ಷಕರು | ಪಠ್ಯ ಪುಸ್ತಕದಲ್ಲಿನ ಓದಿ ತಿಳಿ, ಗಮನಿಸಿ ತಿಳಿ, ಅಭ್ಯಾಸದ ಹಂತದಲ್ಲಿರುವ ಪ್ರಶ್ನೋತ್ತರ ಚಟುವಟಿಕೆಗಳನ್ನು ಮಾಡಿಸುವರು. | | | | ಹಿರೇಮಣಿ | ಜೀವನ ವಿಜ್ಞಾನ ಕೈಪಿಡಿಯ ಪುಟಸಂಖ್ಯೆ 32ರಲ್ಲಿರುವ ಯೋಗ ಪ್ರಾರ್ಥನಾ ಗೀತೆಯನ್ನು ಅಭ್ಯಾಸ ಮಾಡಿಸುವುದು. |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | ಪರಿಸರ ಅಧ್ಯಯನ<br>ನಮ್ಮ ಹಲ್ಲುಗಳು | * ಹಲ್ಲುಗಳ ವಿಧ ಮತ್ತು ಅವುಗಳ ಉಪಯೋಗ ಅರಿಯುವರು | | ಹಿರೇಮಣಿ | ಹಿಂದಿನ ಅವಧಿಯಲ್ಲಿ ಹೇಳಲಾದ ವಿಷಯದ ಬಗ್ಗೆ ಸರಳ ಪ್ರಶ್ನೆಗಳನ್ನು ಪಟ್ಟಿ ಮಾಡಿಕೊಟ್ಟು ಹಿರೇಮಣಿಗೆ ಕೇಳುವಂತೆ ಹೇಳುವುದು. | ಗಣಿತ<br>ದಶಮಾಂಶ, ಭಿನ್ನರಾಶಿ ಮತ್ತು ಶೇಕಡಕ್ರಮ. | * ಭಿನ್ನರಾಶಿ, ದಶಮಾಂಶ ಮತ್ತು ಶೇಕಡಾ ಕ್ರಮದ ಮೌಲ್ಯಮಾಪನ | | ಶಿಕ್ಷಕರು | **ಘಟಕ ಪರೀಕ್ಷೆ :**<br>ಈ ಘಟಕಕ್ಕೆ ಸಂಬಂಧಿಸಿದಂತೆ ಕೆಲವು ಸಮಸ್ಯೆಗಳನ್ನು ಕೊಟ್ಟು ಘಟಕ ಪರೀಕ್ಷೆ ಮಾಡುವುದು. |
| | 30 ನಿ | | | ಹಲ್ಲಿನ ಮಾದರಿ<br>ಹಲ್ಲಿನ ಮಾದರಿ, ಹಲ್ಲುಗಳ ಚಿತ್ರಪಟ | ಶಿಕ್ಷಕರು | ಹಲ್ಲಿನ ಮಾದರಿಯನ್ನು ತೋರಿಸುತ್ತಾ ಬಾಚಿಹಲ್ಲು ಮತ್ತು ಕೋರೆ ಹಲ್ಲುಗಳನ್ನು ಗುರ್ತಿಸಿ ಅವುಗಳ ರಚನೆಯನ್ನು ವಿವರಿಸುವರು. ಅವುಗಳ ಕಾರ್ಯವನ್ನು ವಿವರಿಸುವರು. | | | | ಹಿರೇಮಣಿ | ಮಕ್ಕಳು ಘಟಕ ಪರೀಕ್ಷೆಯಲ್ಲಿ ಪಾಲ್ಗೊಳ್ಳುವರು |
| | 10 ನಿ | | | | ಹಿರೇಮಣಿ | ಮಕ್ಕಳ ಸಂಖ್ಯೆಗನುಗುಣವಾಗಿ ಗುಂಪುಗಳನ್ನು ವಿಂಗಡಿಸಿ ಮಣ್ಣಿನಿಂದ ಬಾಚಿಹಲ್ಲು ಮತ್ತು ಕೋರೆ ಹಲ್ಲುಗಳನ್ನು ತಯಾರಿಸಲು ಹೇಳುವರು. | ಯೋಜನೆ<br>ಕವಿ ಕಾವ್ಯ ಪರಿಚಯ | * ಕನ್ನಡ ಕವಿಗಳ ಕವಿಕಾವ್ಯ ಪರಿಚಯ ಅರಿಯುವರು | | ಶಿಕ್ಷಕರು | ಹಿಂದಿನ ಅವಧಿಯಲ್ಲಿ ತಯಾರಿಸಿದ ಅಂದವಾಗಿ ಬರೆದ ಹಾಳೆಗಳನ್ನು ಕ್ರೋಢೀಕರಿಸುವರು. |
| | 30 ನಿ | | | * ಪೇಪರ್<br>* ಜೇಡಿಮಣ್ಣು<br>* ಪೆನ್ಸಿಲ್ | ಹಿರೇಮಣಿ | **ಸೂಚನೆ :** ಹಿರೇಮಣಿ ಸಹಕಾರದೊಂದಿಗೆ ಹೊರಾಂಗಣದಲ್ಲಿ ಮಾದರಿ ತಯಾರಿಸುವುದು.<br>ಅಥವಾ<br>ಪೆನ್ಸಿಲ್‌ನಿಂದ ಚಿತ್ರ ಬರೆಯುವರು. | | | | ಶಿಕ್ಷಕರು | ನಂತರ ಮುಖಪುಟದ ವಿನ್ಯಾಸವನ್ನು ಮಕ್ಕಳು ಮತ್ತು ಶಿಕ್ಷಕರು ಸೇರಿ ಅಂದವಾಗಿ ತಯಾರಿಸುವರು. |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಸಾಮರ್ಥ್ಯ ಸಂಖ್ಯೆ | ಸಾಮರ್ಥ್ಯ ವಿವರ | ಬಳಸಬೇಕಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಸಾಮರ್ಥ್ಯ ಸಂಖ್ಯೆ | ಸಾಮರ್ಥ್ಯ ವಿವರ | ಬಳಸಬೇಕಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ | 40 ನಿ | ಸಾ.ಉ.ಉ.ಕಾ<br>* ಬೆಂಕಿ ಪೆಟ್ಟಿಗೆಗಳಿಂದ ಆಟಿಕೆ ತಯಾರಿಕೆ | ಬೆಂಕಿ ಪೆಟ್ಟಿಗೆಗಳನ್ನು ಸಂಗ್ರಹಿಸಿ ಅವುಗಳಿಂದ ವಿವಿಧ ಆಟಿಕೆಗಳನ್ನು ತಯಾರಿಸುವುದನ್ನು ಕಲಿಯುವರು. | ಖಾಲಿ ಬೆಂಕಿಪೆಟ್ಟಿಗೆ, ಕಡ್ಡಿಗಳು ಇತ್ಯಾದಿ | ಶಿಕ್ಷಕರು | ಮಕ್ಕಳಿಗೆ ಖಾಲಿ ಬೆಂಕಿಪೆಟ್ಟಿಗೆಗಳನ್ನು ಸಂಗ್ರಹಿಸಿತರಲು ತಿಳಿಸಿ ಅವುಗಳಿಂದ ವಿವಿಧ ಆಟಿಕೆಗಳನ್ನು ಶಿಕ್ಷಕರು ಮಾದರಿಯಾಗಿ ಮಾಡಿ ತೋರಿಸುವರು.<br>ಮಕ್ಕಳು ಶಿಕ್ಷಕರ ಮಾರ್ಗದರ್ಶನದಂತೆ ವಿವಿಧ ಆಟಿಕೆಗಳನ್ನು ತಯಾರಿಸಿ ಪ್ರದರ್ಶಿಸುವರು. ಶಿಕ್ಷಕರು ಉತ್ತಮ ಆಟಿಕೆಗಳನ್ನು ತಯಾರಿಸಿದ ಮಕ್ಕಳನ್ನು ಪ್ರಶಂಸಿಸುವರು. | | | | | 5ನೇ ತರಗತಿಯ 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ. |
| | 40 ನಿ | ಕೇಳಿ – ಕಲಿ | ಕೇಳಿ–ಕಲಿ ರೇಡಿಯೋ ಕಾರ್ಯಕ್ರಮ | | | | | | | | |
| 4ನೇ | 40 ನಿ | ಸಾ.ಉ.ಉ.ಕಾ<br>ಕಾಗದದಿಂದ ಆಟಿಕೆ ತಯಾರಿಕೆ (ರಾಕೆಟ್) | ಕಾಗದದಿಂದ ವಿವಿಧ ಆಟಿಕೆಗಳನ್ನು (ರಾಕೆಟ್) ತಯಾರಿಸುವರು. | ಕಾಗದ, ಕತ್ತರಿ, ಅಂಟು ಇತ್ಯಾದಿ | ಶಿಕ್ಷಕರು | ಕಾಗದದಿಂದ ಶಿಕ್ಷಕರು ಕೆಲವು ಆಟಿಕೆಗಳನ್ನು ಮಾದರಿಯಾಗಿ ಮಾಡಿ ತೋರಿಸಿ ಅದರಂತೆ ಮಾಡಲು ಮಕ್ಕಳಿಗೆ ತಿಳಿಸುವರು. ಶಿಕ್ಷಕರ ಮಾರ್ಗದರ್ಶನದಂತೆ ಮಕ್ಕಳು ವಿವಿಧ ಆಟಿಕೆಗಳನ್ನು ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸುವರು. ಶಿಕ್ಷಕರು ಉತ್ತಮ ಆಟಿಕೆಗಳನ್ನು ತಯಾರಿಸಿದ ವಿದ್ಯಾರ್ಥಿಗಳನ್ನು ಪ್ರಶಂಸಿಸುವರು. | | | | | 5ನೇ ತರಗತಿಯ 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ. |
| | 40 ನಿ | ಮೌಲ್ಯ ಶಿಕ್ಷಣ | * ಕಥೆಗಳಲ್ಲಿನ ನೀತಿಯನ್ನು ಅರಿಯುವರು. | ಗ್ರಂಥಾಲಯದಲ್ಲಿನ ನೀತಿಕಥೆಗಳ ಪುಸ್ತಕಗಳು | ಶಿಕ್ಷಕರು | ಶಿಕ್ಷಕರು ಮಕ್ಕಳಿಗೆ ಗ್ರಂಥಾಲಯದಲ್ಲಿನ ನೀತಿ ಕಥಾ ಪುಸ್ತಕಗಳನ್ನು ಕೊಟ್ಟು ಅವುಗಳನ್ನು ಓದಿ ಅದರಲ್ಲಿನ ನೀತಿಯನ್ನು ಅರಿಯುವಂತೆ ತಿಳಿಸುವರು.<br>ಅದರಲ್ಲಿರುವ ನೀತಿಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ತಿಳಿಸುವರು. | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | | | | | | **ಸಾಮೂಹಿಕ ಕವಾಯಿತು** | | | | | |
| 2ನೇ | 10 ನಿ | ಕನ್ನಡ : ಅಕ್ಕನಿಗೊಂದು ಪತ್ರ | * ಬೇರೆ ಮಕ್ಕಳ ಬರಹಗಳನ್ನು ಓದುವುದು. | * ಪತ್ರಗಳು | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಹೇಳಲಾದ ಅಭ್ಯಾಸದ ಬಗ್ಗೆ ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಕೇಳುವರು ನಂತರ ಶಾಲಾ ಹೊರ ಸಂಚಾರ ಕುರಿತು ಗೆಳೆಯರಿಗೆ ಪತ್ರ ಬರೆಯಲು ಮಾರ್ಗದರ್ಶನ ನೀಡುವರು. | ಕನ್ನಡ<br>ನಮ್ಮ ಕನಸು | * ಸರಳ ಹಾಗೂ ಗೊತ್ತಿರುವ ವಿಷಯಗಳ ಬಗ್ಗೆ ಮಾತನಾಡುವುದು.<br>* ಪದ್ಯದಲ್ಲಿ ಹೇಳಲಾದ ವಿಚಾರಗಳನ್ನು ತಾರ್ಕಿಕವಾಗಿ ಚರ್ಚಿಸಿ ತೀರ್ಮಾನಕ್ಕೆ ಬರುವುದು. | ಹಿರೇಮಣಿ | ಹಿರೇಮಣಿ | ಹಿಂದಿನ ಅವಧಿಯಲ್ಲಿ ಹೇಳಿಕೊಟ್ಟ ಪದ್ಯಭಾಗವನ್ನು ಎಲ್ಲರೂ ಸ್ಪಷ್ಟವಾಗಿ ಹೇಳುವರು. |
| | 30 ನಿ | | | | ಹಿರೇಮಣಿ | ಶಿಕ್ಷಕರು ಕೊಟ್ಟ ಮಾರ್ಗದರ್ಶನದಂತೆ ಮಕ್ಕಳು ತಮ್ಮ ತಮ್ಮ ಗೆಳೆಯ ಗೆಳತಿಯರಿಗೆ ಹೊರ ಸಂಚಾರ ಕುರಿತು ಪತ್ರ ಬರೆಯುವರು. | | | | ಶಿಕ್ಷಕರು | ಪದ್ಯದ ಉಳಿದ ಭಾಗವಾದ "ನಮ್ಮ ಶಕ್ತಿಗೆ.......................... ........................................ ಭೂಮಿ ತನ್ನಯ ಕಂದನ" ಈ ಪದ್ಯವನ್ನು ಓದುವರು ನಂತರ ಅಭಿನಯದೊಂದಿಗೆ ಇಡೀ ಪದ್ಯಭಾಗವನ್ನು ಹೇಳಿಕೊಡುವರು. ತಾತ್ಪರ್ಯ ತಿಳಿಸುವರು. |
| | 40 ನಿ | | | | ಹಿರೇಮಣಿ | ತಾವು ಬರೆದ ಪತ್ರಗಳನ್ನು ಮಕ್ಕಳು ತಾವು ಈವರೆವೆಗೆ ತಮ್ಮ ಸ್ನೇಹಿತರಲ್ಲಿ ಯಾರ ಬರಹವನ್ನು ಓದಿಲ್ಲವೋ ಅಂತಹ ಗೆಳೆಯರ ಪತ್ರಲೇಖನವನ್ನು ಪಡೆದು ಎಲ್ಲ ಮಕ್ಕಳಿಗೂ ಕೇಳಿಸುವಂತೆ ಓದುವರು.<br><br>ನಂತರ ಪಠ್ಯಪುಸ್ತಕದ ಪುಟಸಂಖ್ಯೆ 37 ಮತ್ತು 38ರ ಭಾಷಾಭ್ಯಾಸ ಚಟುವಟಿಕೆಯನ್ನು ಮಾಡುವರು. | ಗಣಿತ<br>ಭಿನ್ನರಾಶಿ ದಶಮಾಂಶ ಮತ್ತು ಶೇಕಡಾ ಕ್ರಮ | * ಭಿನ್ನರಾಶಿ, ದಶಮಾಂಶ ಮತ್ತು ಶೇಕಡಕ್ರಮದ ಪುನರ್ಬಲನ. | | ಶಿಕ್ಷಕರು | **ಪರಿಹಾರ ಬೋಧನೆ :**<br>ಹಿಂದಿನ ಅವಧಿಯಲ್ಲಿ ಮಾಡಿದ ಘಟಕ ಪರೀಕ್ಷೆಯಲ್ಲಿ ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರ್ತಿಸಿ ಆ ಮಕ್ಕಳಿಗೆ ಕಲಿಯದೇ ಇರುವ ಸಾಮರ್ಥ್ಯವನ್ನು ಕಲಿಸುವರು. |
| 3ನೇ | 20 ನಿ<br>60 ನಿ | ಸಾ.ಉ.ಉ.ಕಾ / ಲಲಿತಕಲೆ | * ಕ್ರೆಯಾನ್ಸ್ ಪೆನ್ಸಿಲ್‌ನಿಂದ ಬಣ್ಣ ಹಾಕಿಸುವುದು. | ಕಾಗದ, ಪೆನ್ಸಿಲ್ ಕ್ರೆಯಾನ್ಸ್ ಇತ್ಯಾದಿ | ಶಿಕ್ಷಕರು | ವಿವಿಧ ಪ್ರಾಣಿ ಮತ್ತು ಪಕ್ಷಿಗಳ ಚಿತ್ರಗಳನ್ನು ಶಿಕ್ಷಕರು ಬರೆದು ತೋರಿಸಿ, ಅದರಂತೆ ಮಕ್ಕಳಿಂದ ಬರೆಸುವರು. ನಂತರ ಕ್ರೆಯಾನ್ಸ್ ಪೆನ್ಸಿಲ್‌ನ್ನು ಉಪಯೋಗಿಸಿ ಬಣ್ಣವನ್ನು ಹಾಕಿಸುವರು. ಉತ್ತಮವಾಗಿ ಬಣ್ಣ ಹಚ್ಚಿದ ವಿದ್ಯಾರ್ಥಿಗಳನ್ನು ಪ್ರಶಂಸಿಸುವರು. | | | | | |